ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿ\ಲೆಪ-03\ವಿಜಾಸಂ\2016-17 ದಿನಾಂಕ; 24-12-2016.

## ಸುತ್ತೋಲೆ

ವಿಷಯ:- ವಿಶೇಷ ಜಾಗೃತದಳದ ಸದಸ್ಯರ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳನ್ನು ಇತ್ಯರ್ಥ ಪಡಿಸುವ ಬಗ್ಗೆ.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾರ್ಚ್/ಏಪ್ರಿಲ್ 2016 ಮತ್ತು ಜೂನ್/ಜುಲೈ 2016ರ ದ್ವಿತೀಯ ಪಿಯುಸಿ ಪರೀಕ್ಷೆಗಳಿಗೆ ನಿಯೋಜಿತರಾಗಿದ್ದ ಸಿಬ್ಬಂದಿಗಳ ಸಂಭಾವನೆ ಮತ್ತು ಪ್ರಯಾಣಭತ್ಯೆ ಬಿಲ್ಲು ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಉಪನಿರ್ದೇಶಕರ ಕಛೇರಿಗಳಿಗೆ ಆಯವ್ಯಯ ಹಂಚಿಕೆ ಮಾಡಬೇಕಾಗಿರುತ್ತದೆ.

ಆದ್ದರಿಂದ, ಮಾರ್ಚ್/ಏಪ್ರಿಲ್ 2016 ದ್ವಿತೀಯ ಪಿಯುಸಿ ಮುಖ್ಯಪರೀಕ್ಷೆ ಮತ್ತು ಜೂನ್/ಜುಲೈ 2016ರ ದ್ವಿತೀಯ ಪಿಯುಸಿ ಸಪ್ಲಿಮೆಂಟರಿ ಪರೀಕ್ಷೆಗಳಿಗೆ ನಿಯೋಜಿತರಾಗಿದ್ದ ವಿಶೇಷ ಜಾಗೃತ ದಳ, ಪ್ರಶ್ನೆ ಪತ್ರಿಕೆಪಾಲಕರು, ಖಜಾನೆ ಸಿಬ್ಬಂದಿ, ಪರೀಕ್ಷಾ ಕೇಂದ್ರ ಸಿಬ್ಬಂದಿಗಳ ಸಂಭಾವನ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳು ಹಾಗೂ ಪರೀಕ್ಷಾ ಸಾದಿಲ್ವಾರು ವೆಚ್ಚದ ಬಿಲ್ಲುಗಳನ್ನು (ಹಿಂದಿನ ವರ್ಷಗಳಲ್ಲಿ ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಅನುದಾನಕೊರತೆ/ತಾಂತ್ರಿಕ ಕಾರಣಗಳಿಗಾಗಿ ಪಾವತಿಸಲಾಗದೇ ಬಿಲ್ಲುಗಳು ಬಾಕಿ ಉಳಿದಿದ್ದಲ್ಲಿ ಉಪನಿರ್ದೇಶಕರ ವಿವರಣೆಯೊಂದಿಗೆ ಆ ಬಿಲ್ಲುಗಳೂ ಸೇರಿದಂತೆ) ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಂದ ಆಯಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತರಿಸಿಕೊಂಡು, ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಸದರಿ ಬಿಲ್ಲುಗಳನ್ನು ಪರಿಶೀಲಿಸಿ ನಿಯಮಾನುಸಾರ ಪಾವತಿಗೆ ಅರ್ಹವಾದ ಮೊತ್ತಗಳನ್ನು ಮಾತ್ರ ಶೀರ್ಷಿಕೆವಾರು ಪ್ರತ್ಯೇಕವಾಗಿ ಒಂದು ವಹಿಯಲ್ಲಿ ನಮೂದಿಸಿ ಸಿದ್ಧಪಡಿಸಿಟ್ಟುಕೊಳ್ಳುವುದು.

ಅದರಂತೆ, ಈ ಪತ್ರದ ಜೊತೆ ಲಗತ್ತಿಸಿರುವ ನಮೂನೆಯಲ್ಲಿ ಪಾವತಿಗೆ ಅಗತ್ಯವಿರುವ ಅನುದಾನದ ಬೇಡಿಕೆ ವಿವರಗಳನ್ನು ವಿವರಗಳನ್ನು ಭರ್ತಿಮಾಡಿ ದಿನಾಂಕ: 28-12-2016 ರೊಳಗಾಗಿ ಮಾಹಿತಿಯನ್ನು ಲೆಕ್ಕಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರಿಗೆ ತಲುಪುವಂತೆ ಕಳುಹಿಸಲು ಸೂಚಿಸಿದೆ.

ನಿರ್ದೇಶಕರ ಪರವಾಗಿ,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಮುಂದಿನ ಕ್ರಮಕ್ಕಾಗಿ,
2. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ

## ನಮೂನೆ

**ಮಾರ್ಚ್/ಜೂನ್ 2016ರ ದ್ವಿತೀಯ ಪಿಯುಸಿ ಪರೀಕ್ಷಾ ಕಾರ್ಯಗಳಿಗೆ ನಿಯೋಜಿತರಾಗಿದ್ದ ವಿಶೇಷ ಜಾಗೃತದಳ ಸದಸ್ಯರ, ಪ್ರಶ್ನೆಪತ್ರಿಕೆ ಪಾಲಕರು, ತಹಶೀಲ್ದಾರರು ಮತ್ತು ಬಿ ಇ ಓ ಕಛೇರಿ ಹಾಗೂ ಖಜಾನೆ ಸಿಬ್ಬಂದಿ, ಮತ್ತು ಪರೀಕ್ಷಾ ಕೇಂದ್ರಗಳ ಸಿಬ್ಬಂದಿಗಳ ಸಂಭಾವನೆ/ಪ್ರಯಾಣಭತ್ಯೆ ಅನುದಾನ ಕೋರಿಕೆ ಪತ್ರ**

ರೂ.ಗಳಲ್ಲಿ

| ವಿವರಗಳು | ಬಿಲ್ಲುಗಳ ಸಂಖ್ಯೆ | ಲೆಕ್ಕಶೀರ್ಷಿಕೆ 2202-02-108-0-01-015 ರಡಿ ಅವಶ್ಯವಿರುವ ಅನುದಾನ | ಲೆಕ್ಕಶೀರ್ಷಿಕೆ 2202-02-108-0-01-041 ರಡಿ ಅವಶ್ಯವಿರುವ ಅನುದಾನ | ಲೆಕ್ಕಶೀರ್ಷಿಕೆ 2202-02-108-0-01-221 ರಡಿ ಅವಶ್ಯವಿರುವ ಅನುದಾನ | ಒಟ್ಟು |
|---|---|---|---|---|---|
| ಮಾರ್ಚ್2016 ರ ವಾರ್ಷಿಕ ಪರಿಕ್ಷಾ ಕಾರ್ಯದ ಬಿಲ್ಲುಗಳು | | | | | |
| ಜುಲೈ 2016ರ ಪೂರಕ ಕಾರ್ಯದ ಬಿಲ್ಲುಗಳು | | | | | |
| ಹಿಂದಿನ ಸಾಲಿನ ಬಿಲ್ಲುಗಳು (ಇದ್ದಲ್ಲಿ ಮಾತ್ರ) | | | | | |
| ಒಟ್ಟು | | | | | |

*ಕೋರಿರುವ ಅನುದಾನವು ಕಛೇರಿಯಲ್ಲಿ ಪರಿಶೀಲಿಸಿ ದೃಡಪಡಿಸಿಕೊಂಡಿರುವ ಬಿಲ್ಲುಗಳ ಅನುಸಾರ ಸರಿಯಿರುತ್ತದೆ ಹಾಗೂ ಈ ಜಿಲ್ಲೆಯಲ್ಲಿ ನಿಯೋಜಿತರಾಗಿದ್ದ ಎಲ್ಲಾ ಸಿಬ್ಬಂದಿಯ ಬಿಲ್ಲುಗಳನ್ನು ಪಡೆಯಲಾಗಿರುತ್ತದೆ ಎಂದು ದೃಢೀಕರಿಸಿದೆ.*

*ಜಿಲ್ಲಾ ಉಪನಿರ್ದೇಶಕರು,*
*ಪದವಿ ಪೂರ್ವ ಶಿಕ್ಷಣ ಇಲಾಖೆ,*
*----------------ಜಿಲ್ಲೆ*